**OCTOBER 05, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ ಬಗ್ಗೆ, ಸಚಿವ ಸಂಪುಟದಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಮೈಸೂರಿನ ಉತ್ಕೃಷ್ಟ ಕೇಂದ್ರ; ಕಂದಾಯ ದಾಖಲೆಗಳ ಸಮರ್ಪಕ ನಿರ್ವಹಣೆಗೆ, ಸಹಕಾರಿ – ಕೃಷ್ಣ ಬೈರೇಗೌಡ.**
- **ರಾಯಚೂರಿನ ಜಕ್ಕಲದಿನ್ನಿಯಲ್ಲಿ, ರೈತ ಉತ್ಪಾದಕರ ಕಂಪೆನಿಯ ಸಿರಿಧಾನ್ಯ ಸಂಸ್ಕರಣಾ ಘಟಕ, ಕಾರ್ಯಾರಂಭ.**
- **ಹಾವೇರಿ ಹೊಸಮಠದ ಸಮುದಾಯ ಭವನದಲ್ಲಿ, ಇಂದು ಮತ್ತು ನಾಳೆ, 'ಸೊಪ್ಪಿನ ವಿಶೇಷ ಮೇಳ'.**

<><><>

**ಈಗ ವಾರ್ತೆಗಳ ವಿವರ**

<><><>

**ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು, ರಾಜ್ಯ ಸರ್ಕಾರ ಸ್ವೀಕರಿಸಿದ್ದು, ಈ ಸಂಬಂಧ ಸಚಿವ ಸಂಪುಟದಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಕೊಪ್ಪಳದ ಗಿಣಿಗೇರಾ ವಾಯುನೆಲೆಯಲ್ಲಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ವರದಿಯ ಬಗ್ಗೆ, ಸಚಿವ ಸಂಪುಟದಲ್ಲಿ ಚರ್ಚಿಸಿದ ಬಳಿಕ ಜಾರಿ ಗೊಳಿಸುವ ಬಗ್ಗೆ, ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಈ ಸಂಬಂಧ ಹಿಂದುಳಿದ ವರ್ಗಗಳ ಇಲಾಖೆಯ ಜೊತೆಯೂ, ಚರ್ಚಿಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು. ಪರಿಶಿಷ್ಟ ಸಮುದಾಯದಲ್ಲಿ ಒಳಮೀಸಲಾತಿ ಜಾರಿ ಕುರಿತಂತೆ, ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆ, ಸಚಿವ ಸಂಪುಟ ಮತ್ತು ಪಕ್ಷದ ವರಿಷ್ಠರ ಜೊತೆ ಚರ್ಚೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟ ಪಡಿಸಿದರು.**

<><><>

**ಮೊಟ್ಟ ಮೊದಲ ಬಾರಿಗೆ ಆರಂಭಿಸಲಾದ, ವೈಭವದ ಸಿಂಧನೂರು ದಸರಾ ಉತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಾವಿರದ 6 ನೂರಾ 95 ಕೋಟಿ 85 ಲಕ್ಷ ರೂಪಾಯಿ ವೆಚ್ಚದ, ರಾಯಚೂರು ಕಲ್ಮಲಾ ಜಂಕ್ಷನ್ ನಿಂದ, ಸಿಂಧನೂರು ಬಳಿ, ಬಳ್ಳಾರಿ – ಲಿಂಗಸಗೂರು ರಸ್ತೆ ವರೆಗೆ, 79 ಕಿಲೋ ಮೀಟರ್ ಉದ್ದದ, ರಸ್ತೆ ಕಾಮಗಾರಿಗೆ, ಮುಖ್ಯಮಂತ್ರಿ ಚಾಲನೆ ನೀಡಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ, 371 ಜೆ ಜಾರಿಯಾಗಿ, ದಶಮಾನೋತ್ಸವ**

ಪ್ರಯುಕ್ತ, ಕಲಬುರಗಿಯಲ್ಲಿ ವಿಶೇ ’ ಸಚಿವ ಸಂಪುಟ ಸಭೆ ನಡೆಸಿ, 11 ಸಾವಿರದ 770 ಕೋಟಿ ರೂಪಾಯಿ ಅಭಿವೃದ್ಧಿ ಯೋಜನೆಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು, ಮುಖ್ಯಮಂತ್ರಿ ತಿಳಿಸಿದರು.

<><><>

ಉತ್ಕೃ ್ಟ ಕೇಂದ್ರ ಮೈಸೂರಿನಲ್ಲಿ ಕಾರ್ಯಾರಂಭಿಸಿದ್ದು, ಕಂದಾಯ ಇಲಾಖೆಯ ಭೂ ದಾಖಲೆಗಳ ಸಮರ್ಪಕ ನಿರ್ವಹಣೆಗೆ, ಅನುವಾಗಲಿದೆ ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಮೈಸೂರಿನಲ್ಲಿ ದೇಶದ ಮೂರನೇ ಆಡಳಿತ ತರಬೇತಿ ಸಂಸ್ಥೆಯನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಭೂ ಮಾಲಿಕತ್ವ ಮತ್ತು ದಾಖಲೆಗಳ ಪರಿಣಾಮಕಾರಿ ನಿರ್ವಹಣೆ ಮೂಲಕ, ಕಂದಾಯ ಇಲಾಖೆಯನ್ನು ಇನ್ನಷ್ಟು ಜನಪರಗೊಳಿಸುವ ನಿಟ್ಟಿನಲ್ಲಿ, ಉತ್ಕೃಷ್ಟ ಕೇಂದ್ರ ಸಹಕಾರಿಯಾಗಲಿದೆ ಎಂದರು. ದಕ್ಷಿಣ ಭಾರತದ ರಾಜ್ಯಗಳಾದ ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡು ಸೇರಿದಂತೆ, ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳ ತರಬೇತಿಗೆ ಅನುಕೂಲವಾಗಲಿದೆ. ಕೇಂದ್ರದ ಸಹಯೋಗದಲ್ಲಿ ಈ ಕೇಂದ್ರ ಕಾರ್ಯಾರಂಭಿಸಿದೆ ಎಂದು, ಸಚಿವ ಕೃಷ್ಣ ಬೈರೇಗೌಡ ಹೇಳಿದರು.

<><><>

ಬೆಳಗಾವಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ, 800 ಕೋಟಿ ರೂಪಾಯಿ ಹಾಗೂ ಗೋವಾ, ಹೈದರಾಬಾದ್ ರಸ್ತೆ ಅಭಿವೃದ್ಧಿಗೆ ಅನುದಾನ ಮೀಸಲಿದೆ ಎಂದು, ಕೇಂದ್ರ ಹೆದ್ದಾರಿ ಹಾಗೂ ಲೋಕೋಪಯೋಗಿ ಖಾತೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆ, ನಿಪ್ಪಾಣಿಯಲ್ಲಿ ವಿದ್ಯಾ ಸಂವರ್ಧಕ ಮಂಡಳ, ನೂತನವಾಗಿ ನಿರ್ಮಿಸಿದ, ಎಂ.ಬಿ.ಎ. ಹಾಗೂ ಎಂ.ಸಿ.ಎ. ನೂತನ ಕಟ್ಟಡಗಳನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಕೇಂದ್ರ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಮಾತನಾಡಿ, ಸುವರ್ಣ ಪಥ ನಿರ್ಮಾಣ ಪ್ರಧಾನಿಯವರಿಂದ ಆರಂಭವಾದರೆ, ಗ್ರಾಮ ಸಡಕ್ ಯೋಜನೆ ನಿತಿನ್ ಗಡ್ಕರಿ ಅವರಿಂದ ಪ್ರಾರಂಭವಾಯಿತು ಎಂದರು.

<><><>

ಕಿತ್ತೂರು ಚನ್ನಮ್ಮಾಜಿಯ ವೀರೋಚಿತ, ಬ್ರಿಟಿಷ್ ವಿರುದ್ಧದ ವಿಜಯೋತ್ಸವದ, ದ್ವಿ ಶತಮಾನೋತ್ಸವದ ಹಿನ್ನೆಲೆ, ಈ ಬಾರಿ ಕಿತ್ತೂರು ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು, ಬೆಳಗಾವಿ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು, ಜಿಲ್ಲಾಧಿಕಾರಿ ಮೊಹಮ್ಮದ್ ರೋ ’ನ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ, ಕಿತ್ತೂರು ಉತ್ಸವದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ, ವಿವಿಧ ಸಮಿತಿಗಳ ಸದಸ್ಯರೊಂದಿಗೆ ಅವರು ಸಮಾಲೋಚಿಸಿದರು.

<><><>

ಈ ಮಧ್ಯೆ, ‘ಕಿತ್ತೂರು ಚನ್ನಮ್ಮ ವಿಜಯೋತ್ಸವ ದ್ವಿ ಶತಮಾನ ಸಂಭ್ರಮ’, ಜ್ಯೋತಿ ರಥ ಯಾತ್ರೆ, ಕೋಲಾರ ತಲಿಪಿದ್ದು, ಜಿಲ್ಲಾಧಿಕಾರಿ ಅಕ್ರಂ ಪಾಷಾ ಸ್ವಾಗತಿಸಿದರು.

<><><>

ಕೇಂದ್ರ ನೀತಿ ಆಯೋಗ, 90 ದಿನಗಳ ಕಾಲ ಕೈಗೊಂಡ, ಸಂಪೂರ್ಣತಾ ಅಭಿಯಾನ, ಮಹತ್ವಾಕಾಂಕ್ಷಿ ಕಲಬುರಗಿ ಜಿಲ್ಲೆಯ, ಆಳಂದ... 

ಜಿಲ್ಲೆಯ, ಆಶೋತ್ತರ ತಾಲೂಕು ಕಾಳಗಿಯಲ್ಲಿ ಯಶಸ್ವಿಯಾಗಿ, ಸಂಪನ್ನಗೊಂಡಿದೆ. 2024ನೇ ಸಾಲಿಗೆ, ದಕ್ಷಿಣ ಭಾರತ ವಲಯದಡಿ, ಕಾಳಗಿ ತಾಲೂಕು ಡೆಲ್ಟಾ 2ನೇ ರ್‍ಯಾಂಕ್ ಗಳಿಸಿ, ಒಟ್ಟು 6 ಸೂಚ್ಯಾಂಕಗಳ ಪೈಕಿ, ಐದರಲ್ಲಿ ನೂರರಷ್ಟು ಪ್ರಗತಿ ಸಾಧಿಸಿದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭಂವರ್‌ಸಿಂಗ್ ಅಧಿಕಾರಿ ತಿಳಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕಾಳಗಿ ತಾಲೂಕಿನ ಸಂಪೂರ್ಣತಾ ಅಭಿಯಾನದ ಫೆಲೋ, ಶಿವರಾಜ ಹೋಳ್ಕರ.

<><><>

ಶಿವರಾಜ ಹೋಳ್ಕರ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಹೈದರಾಬಾದಿನ ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ, ರಾಯಚೂರು ಜಿಲ್ಲೆ ಸಿರವಾರ ತಾಲೂಕಿನ, ಜಕ್ಕಲದಿನ್ನಿ ಗ್ರಾಮದ, ಬೆಟ್ಟದ ಬಸವೇಶ್ವರ ರೈತ ಉತ್ಪಾದಕರ ಕಂಪೆನಿ, ಸಿರಿಧಾನ್ಯ ಸಂಸ್ಕರಣಾ ಘಟಕ ಆರಂಭಿಸಿದೆ. ರಾಯಚೂರು ಜಿಲ್ಲೆಯ, 300ಕ್ಕೂ ಹೆಚ್ಚು ಪ್ರಗತಿಪರ ಕೃಷಿಕರ, ಸಿರಿಧಾನ್ಯ ಬೆಳೆಗಳ ಮೌಲ್ಯವರ್ಧನೆಗೆ, ಈ ಘಟಕ ಸಹಕಾರಿಯಾಗಿದೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹೈದರಾಬಾದಿನ ಭಾರತೀಯ ಸಿರಿಧಾನ್ಯ ಸಂಶೋಧನಾ ಸಂಸ್ಥೆಯ, ಹಿರಿಯ ವಿಜ್ಞಾನಿ, ಡಾಕ್ಟರ್ ಸಂಗಪ್ಪ.

<><><>

ಡಾಕ್ಟರ್ ಸಂಗಪ್ಪ ಧ್ವನಿ 50 ಸೆಕೆಂದುಗಳು

<><><>

ಇಂದು ಮತ್ತು ನಾಳೆ, ಹಾವೇರಿಯ ಹೊಸಮಠದ, ಶ್ರೀ ಬಸವೇಶ್ವರ ಸಮುದಾಯ ಭವನದಲ್ಲಿ, 'ಸೊಪ್ಪಿನ ಮೇಳ' ಆಯೋಜಿತವಾಗಿದೆ. ಸಹಜ ಸಮೃದ್ಧ, ಸಾವಯವ ಕೃಷಿಕರ ಬಳಗ ಹಾಗೂ ವನಸಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆ ಜೊತೆಗೂಡಿ ಆಯೋಜಿಸಿರುವ, ಸೊಪ್ಪಿನ ಮೇಳದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲೂಕು, ಇಟಗಿ ಗ್ರಾಮದ ಸಾವಯವ ಸೊಪ್ಪುಗಳ ಕೃಷಿಕ,  ರೇವಣಪ್ಪ ಪೂಜಾರ.

<><><>

ರೇವಣಪ್ಪ ಪೂಜಾರ ಧ್ವನಿ 28 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಮುಂಡಗೋಡ ತಾಲೂಕಿನ ಬಾಚಣಕಿ ಗ್ರಾಮ ಪಂಚಾಯ್ತಿ  ಆವರಣದಲ್ಲಿ 'ಉದ್ಯೋಗ ಖಾತರಿ ನಡಿಗೆ, ಸಬಲತೆ ಎಡೆಗೆ' ಅಭಿಯಾನಕ್ಕೆ ಮುಂಡಗೋಡ ತಾಲೂಕು ಪಂಚಾಯ್ತಿ, ಸಹಾಯಕ ನಿರ್ದೇಶಕ, ಸೋಮಲಿಂಗಪ್ಪ ಛಬ್ಬಿ ಚಾಲನೆ ನೀಡಿದರು. ಸ್ವ ಗ್ರಾಮದಲ್ಲಿ ವಾರ್ಷಿಕ 100 ದಿನಗಳ ಉದ್ಯೋಗ ನೀಡಿ, ಸಮಾನ ಕೂಲಿಯನ್ನು ಫಲಾನುಭವಿಯ ಖಾತೆಗೆ ನೇರವಾಗಿ ಜಮೆ ಮಾಡುವ ಪ್ರಾವಧಾನವಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆ ಅಡಿ, ವಯಕ್ತಿಕ ಕಾಮಗಾರಿಗಳಾದ ದನದ ಕೊಟ್ಟಿಗೆ, ಕುರಿ ಶೆಡ್, ಬಚ್ಚಲು ಗುಂಡಿ, ಕೋಳಿ ಶೆಡ್, ಎರೆಹುಳು ಘಟಕ, ತೆರೆದ ಬಾವಿ ನಿರ್ಮಿಸಿಕೊಳ್ಳಲು, ಪ್ರಾವಧಾನವಿದೆ ಎಂಬ ಮಾಹಿತಿ ಪತ್ರಕವನ್ನು ಮನೆ ಮನೆಗೆ ವಿತರಿಸಲಾಯಿತು.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲೂಕಿನ, ವಿಶ್ವನಾಥಪುರ ಗ್ರಾಮ ಪಂಚಾಯಿತಿಯಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ವಿಶೇ ' ಗ್ರಾಮ ಸಭೆ ನಡೆಯಿತು.

<><><>

70ನೇ ವನ್ಯಜೀವಿ ಸಪ್ತಾಹ ಹಾಗೂ ವಿಶ್ವ ಪ್ರಾಣಿ ದಿನದ ಅಂಗವಾಗಿ, ಮಾನವ-ಹಾವುಗಳ ಸಂಘರ್ಷ ನಿರ್ವಹಣೆ ಮತ್ತು ಉಪಶಮನ ಆರೈಕೆ ಕುರಿತ  ಮಾಹಿತಿ ಕಾರ್ಯಗಾರ, ಧಾರವಾಡದ ಮೂರ್ತಿ ಟ್ರಸ್ಟ್ ವನ ಭವನದಲ್ಲಿ ಜರುಗಿತು. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ವಿವೇಕ ಕವರಿ ಮಾತನಾಡಿ, ಅರಣ್ಯ ಇಲಾಖೆಯಿಂದ ಹಾವುಗಳ ರಕ್ಷಣೆಗೆ, ಪ್ರಮಾಣಿತ ಕಾರ್ಯಾಚರಣೆ ಕೈಪಿಡಿ ಬಿಡುಗಡೆ ಗೊಳಿಸಲಾಗಿದೆ ಎಂದರು. ಉತ್ತರಕನ್ನಡ ಜಿಲ್ಲೆ, ಹಳಿಯಾಳ ವಲಯದ ಗಸ್ತು ಅರಣ್ಯ

ಪಾಲಕ, ಶಂಕರಾನಂದ ಜಿದ್ದಿಮನಿ, ಪ್ರಾತ್ಯಕ್ಷಿಕೆ ಮೂಲಕ, ಹಾವು ಮತ್ತು ಮನುಷ್ಯರ ಸಹಜೀವನದ ಮಹತ್ವವನ್ನು ವಿವರಿಸಿದರು.

<><><>

ಉತ್ತರಕನ್ನಡ ಜಿಲ್ಲೆ ಜೊಯಿಡಾ ತಾಲೂಕು, ಫಣಸೋಲಿಯಲ್ಲಿ, ಕಾಳಿ ಹುಲಿ ಸಂರಕ್ಷಿತ ಅರಣ್ಯದಲ್ಲಿ ಆಯೋಜಿತ, 70ನೇ ವನ್ಯಜೀವಿ ಸಪ್ತಾಹಕ್ಕೆ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಿಲೇಶ್ ಶಿಂಧೆ ಚಾಲನೆ ನೀಡಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

'ಗೋಕಾಕ ಚಳವಳಿ 42ನೇ ಸಂಸ್ಮರಣಾ ದಿನದ ಹಿನ್ನೆಲೆ, ಹಿನ್ನೋಟ, ಮುನ್ನೋಟ' ಕಾರ್ಯಕ್ರಮ, ಇಂದು ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಆಯೋಜಿತವಾಗಿದೆ.

<><><>

ಕಲಬುರಗಿ ಕೋಟೆಯ ಸಂರಕ್ಷಣಾ ಕಾಮಗಾರಿಯನ್ನು, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಹಾ ಪೌರರಾದ ಯಲ್ಲಪ್ಪ ನಾಯಕೋಡಿ ಅವರೊಂದಿಗೆ ಪರಿಶೀಲಿಸಿದರು.

<><><>

ಬಳ್ಳಾರಿ ಜಿಲ್ಲೆ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಯಶವಂತರಾಜ್ ನಾಗಿರೆಡ್ಡಿ ಅಧಿಕಾರ ವಹಿಸಿಕೊಂಡಿದ್ದಾರೆ. **(09)**

<><><>

ಧಾರವಾಡ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ – ಡಿಮ್ಹಾನ್ಸ್ ನ ನೂತನ ಮುಖ್ಯ ಆಡಳಿತಾಧಿಕಾರಿಯಾಗಿ, ಹಿರಿಯ ಕೆ.ಎ.ಎಸ್. ಅಧಿಕಾರಿ ಸಿದ್ಧಲಿಂಗಯ್ಯ ಹಿರೇಮಠ ಅಧಿಕಾರ ವಹಿಸಿಕೊಂಡಿದ್ದಾರೆ.

<><><>

ಚಿಕ್ಕಬಳ್ಳಾಪುರದಲ್ಲಿ, ರಾಜ್ಯ ಮಾನವ ಹಕ್ಕುಗಳ ಆಯೋಗದ ಹಂಗಾಮಿ ಅಧ್ಯಕ್ಷ ಟಿ.ಶ್ಯಾಮ್ ಭಟ್ ಹಾಗೂ ಸದಸ್ಯ ಎಸ್.ಕೆ.ವಂಟಿಗೋಡಿ, ವಿವಿಧೆಡೆ ಪರಿಶೀಲನೆ ಕೈಗೊಂಡರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ ಬಗ್ಗೆ, ಸಚಿವ ಸಂಪುಟದಲ್ಲಿ ಚರ್ಚಿಸಿ, ಸೂಕ್ತ ನಿರ್ಧಾರ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮೈಸೂರಿನ ಉತ್ಕೃ ಷ್ಟ ಕೇಂದ್ರ; ಕಂದಾಯ ದಾಖಲೆಗಳ ಸಮರ್ಪಕ ನಿರ್ವಹಣೆಗೆ, ಸಹಕಾರಿ – ಕೃಷ್ಣ ಬೈರೇಗೌಡ.
- ರಾಯಚೂರಿನ ಜಕ್ಕಲದಿನ್ನಿಯಲ್ಲಿ, ರೈತ ಉತ್ಪಾದಕರ ಕಂಪೆನಿ, ಸಿರಿಧಾನ್ಯ ಸಂಸ್ಕರಣಾ ಘಟಕ, ಕಾರ್ಯಾರಂಭ.
- ಹಾವೇರಿ ಹೊಸಮಠದ ಸಮುದಾಯ ಭವನದಲ್ಲಿ, ಇಂದು ಮತ್ತು ನಾಳೆ, 'ಸೊಪ್ಪಿನ ವಿಶೇಷ ಮೇಳ'.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ

ಮಧು/ಬಂಗಾರಪ್ಪ

ಸೌಲಭ್ಯ ಬಯಸಿ ಕಚೇರಿಗೆ ಆಗಮಿಸುವ, ಗ್ರಾಮೀಣ ಮತ್ತು ನಗರ ಪ್ರದೇಶದ ಸಾರ್ವಜನಿಕರಿಗೆ, ಅಧಿಕಾರಿಗಳು ಸಕಾಲದಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಂತೆ, ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಸೂಚಿಸಿದ್ದಾರೆ. ಸಾಗರ ಬಳಿ ತಾಳಗುಪ್ಪದಲ್ಲಿ ಏರ್ಪಡಿಸಿದ್ದ, 'ಜನ ಸ್ಪಂದನಾ' ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು.

'94 ಸಿ ಯೋಜನೆ' ಗ್ರಾಮೀಣ ಬಡ ಜನರಿಗೆ, ಹಕ್ಕುಪತ್ರ ನೀಡಿ, ಅವರ ನೆಮ್ಮದಿಯ ಬದುಕಿಗೆ ಆಸರೆಯಾಗುವ, ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾಗಿದೆ. ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಅವರಿಗೆ ಈ ಶ್ರೇಯ ಸಲ್ಲಬೇಕು ಎಂದರು.

ಬಳಿಕ ಸಚಿವರು, ಸಾಗರ ತಾಲೂಕಿನ ಶ್ರೀ ಕ್ಷೇತ್ರ ಸಿಗಂದೂರು ಚೌಡಮ್ಮ ದೇಗುಲದಲ್ಲಿ, ದಸರಾ ವೈಭವ ಕಾರ್ಯಕ್ರಮಕ್ಕೆ, ಚಾಲನೆ ನೀಡಿದರು.